ಕರ್ನಾಟಕ ವಿಧಾನ ಸಭೆ

ಮಂಗಳವಾರ 23ನೇ ಜುಲೈ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ರಾಜ್ಯದಲ್ಲಿ ಅಂತರ್ಜಲದ ಗಣನೀಯ ಇಳಿಮುಖ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 181 (1117)

ಶ್ರೀ ಎ.ರಾಮದಾಸ್ (ಕೃಷ್ಣರಾಜ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕದಲ್ಲಿ ಕಳೆದ ಒಂದು ದಶಕದಿಂದ ಅಂತರ್ಜಲ ಗಣನೀಯವಾಗಿ ಇಳಿಮುಖವಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಪ್ರಮುಖ ಕಾರಣಗಳೇನು ಹಾಗೂ ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಳ್ಳಲಿರುವ ಶಾಶ್ವತ ಕ್ರಮವೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಹೌದು.

ಆ) ಕರ್ನಾಟಕದಾದ್ಯಂತ ನೀರಾವರಿ ಬಾವಿಗಳಿಂದ ಯಥೇಚ್ಛವಾಗಿ ಅಂತರ್ಜಲವನ್ನು ಬಳಕೆ ಮಾಡುತ್ತಿರುವುದರಿಂದ ಮತ್ತು ಅನಿಶ್ಚಿತ ಮಳೆಯ ಕಾರಣ ಅಂತರ್ಜಲ ಮಟ್ಟವು ಗಣನೀಯವಾಗಿ ಇಳಿಮುಖವಾಗುತ್ತಿದೆ. ಈ ನಿಟ್ಟಿನಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಸಂಶೋಧನೆ ಮತ್ತು ಅಭಿವೃದ್ಧಿ ಘಟಕವು ಅಂತರ್ಜಲ ಕೃತಕ ಮರು ಪೂರೈಕೆಯ ಬಗ್ಗೆ ಅಧ್ಯಯನವನ್ನು ಮಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕೃತಕ ನೀರು ಪೂರೈಕೆ ರಚನೆಗಳನ್ನು ನಿರ್ಮಿಸುವುದು ಈ ನಿಟ್ಟಿನಲ್ಲಿ ಕೆಲವು ವಿಧಾನಗಳಲ್ಲಿ ಒಂದಾಗಿದೆ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸುಮಾರು ಒಂದು ದಶಕದಿಂದ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ ಎನ್ನುವ ಬಗ್ಗೆ ವಿಶೇಷವಾಗಿ

ವರ್ಲ್ಡ್‌ಬ್ಯಾಂಕ್‌ನ ಸಾಲದ ವಿಚಾರ ಬಂದಾಗಲೂ ಕೂಡ ಅಲ್ಲಿಂದಲೂ ವಾರ್ನಿಂಗ್ ಬಂದು ಸುಮಾರು ಮೂರು ವರ್ಷಗಳಾದರೂ ಕೂಡ ಇವೊತ್ತಿನವರೆಗೂ ಈ ಅಂತರ್ಜಲದ ಅಭಿವೃದ್ಧಿಗಾಗಿ ಮತ್ತು ಕೊಳವೆಭಾವಿಗಳು ಹಾಳಾಗುತ್ತಿರುವ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮೂಲಕ ಅಧ್ಯಯನ ಮಾಡಲು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆಂದು ಹೇಳಿದ್ದಾರೆ. ತತ್‌ಕ್ಷಣಕ್ಕೆ ಯಾವ ಕ್ರಮವನ್ನು ಈ ವಿಚಾರದಲ್ಲಿ ತೆಗೆದುಕೊಂಡಿದ್ದಾರೆಂಬ ಬಗ್ಗೆ ಉತ್ತರದಲ್ಲಿ ಪ್ರಸ್ತಾಪವಿಲ್ಲ. ಆದುದರಿಂದ ಈ ಕುರಿತು ಸರಕಾರದವರು ತೆಗೆದುಕೊಂಡ ಕ್ರಮಗಳೇನು ಎಂಬುದನ್ನು ತಿಳಿಯಬಯಸುತ್ತೇನೆ.

ಶ್ರೀ ತಿಪ್ಪೆಸ್ವಾಮಿ:- ಮಾನ್ಯ ಸಭಾಧ್ಯಕ್ಷರೇ, ಈ ಅಂತರ್ಜಲ ಅಭಿವೃದ್ಧಿಯಾಗಬೇಕಾದರೆ ಮಳೆ ಬರಬೇಕು. ಮಳೆ ಬಂದರೆ ಮಾತ್ರ ಅಂತರ್ಜಲ ಅಭಿವೃದ್ಧಿಯಾಗುತ್ತದೆ. ಇದಕ್ಕೋಸ್ಕರವಾಗಿ ನಮ್ಮ ಕೆರೆಗಳಲ್ಲಿ ಅಷ್ಟಿಷ್ಟು ಬಂದ ನೀರನ್ನು ಭೂಮಿಯೊಳಗೆ ಇಂಗುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಆಗ ಅಂತರ್ಜಲ ಇಂಪ್ರೂವ್ ಆಗುತ್ತದೆ. ಕೆರೆಯ ಮಣ್ಣನ್ನೆಲ್ಲಾ ತೆಗೆದು ಹೂಳು ತೆಗೆಯಲು ಆಗದಿದ್ದರೂ ಕೂಡ ಏರಿಯ ಪಕ್ಕದಲ್ಲಿಯೇ ನೂರು ಮೀಟರ್ ಆಗಲ, 200 ಮೀಟರ್ ಉದ್ದಕ್ಕೆ ತೆಗೆಯುವುದರಿಂದ ಹೀಗೆ ತೆಗೆದ ಜಾಗದಲ್ಲಿ ನೀರು ಇಂಗುವುದಕ್ಕೆ ಅವಕಾಶವಾಗುತ್ತದೆ. ಹಾಗೆಯೇ ಕೊಳ ನಿರ್ಮಾಣ ಮಾಡುವುದು. ಚೆಕ್ ಡ್ಯಾಂಗಳನ್ನು ಕಟ್ಟಿ ನೀರು ಹರಿಯುವಂಥ ಭಾಗಗಳಲ್ಲಿ ನೀರು ನಿಲ್ಲಿಸಿದರೆ ಅಂಥ ನೀರು ಭೂಮಿಯೊಳಗೆ ಹೋಗುವುದಕ್ಕೆ ಅನುಕೂಲ ಆಗುತ್ತದೆ. ಆದರೆ ಈ ಕೆಲಸಗಳನ್ನು ತುರ್ತಾಗಿ ಮಾಡುವುದಕ್ಕಾಗುವುದಿಲ್ಲ. ಹೀಗೆ ಈ ವ್ಯವಸ್ಥೆಯನ್ನು ಮಾಡಿ ಇಟ್ಟುಕೊಂಡಿದ್ದರೆ ನೀರು ಇಂಗುವುದಕ್ಕೆ ಅವಕಾಶವಾಗುತ್ತದೆ. ಹೋದ ವರ್ಷ ನಮ್ಮಲ್ಲಿ ಮಳೆಯು ಬಹಳ ಕಡಿಮೆ ಬಂದುದರಿಂದ ಅಂತರ್ಜಲದ ಮೇಲೆ ಪರಿಣಾಮವಾಗಿರಬಹುದು. ಮಾನ್ಯ ಸದಸ್ಯರು ಹೇಳಿದ ಮಾತುಗಳಲ್ಲಿ ಸತ್ಯಾಂಶವಿದೆ. ಇವೊತ್ತು ಕೊಳವೆಬಾವಿಗಳ ಮೂಲಕ ಅಂತರ್ಜಲವನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆಯುತ್ತಿರುವುದಕ್ಕೂ, ಮಳೆಯ ಪ್ರಮಾಣವು ಕಡಿಮೆಯಾಗುತ್ತಿರುವುದಕ್ಕೂ ಭೂಗರ್ಭದಲ್ಲಿರತಕ್ಕಂಥ ನೀರಿನ ಪ್ರಮಾಣವು ಬಹಳ ಕಡಿಮೆಯಾಗಿದೆ. ಅದನ್ನು ಇಂಪ್ರೂವ್ ಮಾಡುವುದಕ್ಕೆ ನಾವೀಗ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಸಬಯಸುತ್ತೇನೆ.

ಶ್ರೀ ಎ.ರಾಮದಾಸ್:- ಮಾನ್ಯ ಸಭಾಧ್ಯಕ್ಷರೇ, ಕೊಳವೆಬಾವಿಗಳನ್ನು ಆಳವಾಗಿ ತೊಡುವ ವಿಚಾರದಲ್ಲಿ ಸರಕಾರವು ಯಾವುದಾದರೂ ರಿಸ್ಟ್ರಿಕ್ಷನ್ಸ್ ಇಟ್ಟುಕೊಂಡಿದೆಯೇ? ವಿಶೇಷವಾಗಿ ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ, ಮೈಸೂರು ಗ್ರಾಮಾಂತರ - ಈ ಪ್ರದೇಶಗಳಲ್ಲಿ ಶೇಕಡಾ 27ರಷ್ಟು ಕೊಳವೆ ಬಾವಿಗಳು ಹಾಳಾಗುತ್ತಾ

ಇವೆ ಎನ್ನುವ ಬಗ್ಗೆ ಈಗಾಗಲೇ ರಿಪೋರ್ಟ್ ಇದೆ. ಸರಕಾರ ಕೊಳವೆಬಾವಿಗಳನ್ನು ತೋಡುವಂಥ ವಿಚಾರದಲ್ಲಿ ರಿಸ್ಟ್ರಿಕ್ಷನ್ಸ್ ಇಟ್ಟು ಅಥವಾ ಇಂಥ ಪ್ರದೇಶಗಳಲ್ಲಿ ತೋಡಬಾರದು ಎಂದು ನಿರ್ಬಂಧಿಸುವ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಇಟ್ಟುಕೊಂಡಿದೆಯೇ?

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಅಧ್ಯಕ್ಷರೇ, ನಾವು ಸರಕಾರದಿಂದ ಸಾಲವನ್ನು ಕೊಟ್ಟು ತೋಡುವ ಬಾವಿಗಳ ಬಗ್ಗೆ ಕೆಲವೊಂದು ರಿಸ್ಟ್ರಿಕ್ಷನ್ಸ್ ಇಟ್ಟುಕೊಂಡಿದ್ದೇವೆ. ಆದರೆ ಎಲ್ಲರಿಗೂ ಈ ನಿಯಮಗಳನ್ನು ಇಟ್ಟಾಗ ಮುಂದೆ ಕೆಲವು ನಿರ್ಬಂಧಗಳನ್ನು ಹಾಕಬೇಕು. ಇಷ್ಟೇ ಆಳಕ್ಕೆ ತೋಡಬೇಕು, ಇಷ್ಟೇ ನೀರನ್ನು ತೆಗೆಯಬೇಕು, ಇಂಥಿಂಥ ಕಾರ್ಯವ್ಯಾಪ್ತಿಯು ಇರಬೇಕು ಎಂದು ಒಂದು ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ. ಸದ್ಯಕ್ಕೆ ಅಂಥ ಯಾವ ಕಾರ್ಯಕ್ರಮವೂ ಇಲ್ಲ.

ಶ್ರೀ ಎ.ರುಕ್ಮಯ್ಯ ಪೂಜಾರಿ:- ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ವಿಶೇಷತಃ ಎರಡು ಮೂರು ತಾಲ್ಲೂಕುಗಳಲ್ಲಿ ಅಂತರ್ಜಲ ಇಲ್ಲವೆಂದು ಹೇಳಿ ಅದನ್ನು ಕಪ್ಪು ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ರೈತರು ತೆರೆದ ಬಾವಿಗಳನ್ನು ತೋಡಲು ಬ್ಯಾಂಕ್‌ಗಳಿಂದ ಸಾಲ ಸಿಗುತ್ತಾ ಇಲ್ಲ. ಇದರಿಂದಾಗಿ ತೊಂದರೆಯಾಗುತ್ತಾ ಇದೆ. ಆದುದರಿಂದ ಅಂತರ್ಜಲವನ್ನು ಜಾಸ್ತಿ ಮಾಡಬೇಕಾದರೆ ನಮ್ಮಲ್ಲಿ ಹೆಚ್ಚು ಹೊಳೆಗಳು ಇರುವುದರಿಂದ ಅವುಗಳಿಗೆ ಅಲ್ಲಲ್ಲಿ ವೆಂಟಿಡ್‌ಡ್ಯಾಂನ್ನು ಕಟ್ಟುವ ಮೂಲಕ ನೀರು ಸಂಗ್ರಹಣೆ ಮಾಡುವುದರ ಮೂಲಕ ಅಂತರ್ಜಲವನ್ನು ವೃದ್ಧಿಮಾಡುವ ಕೆಲಸವನ್ನು ಸರಕಾರ ಮಾಡಬಹುದಾಗಿದೆ. ಆ ವಿಚಾರ ಸರಕಾರದ ಮುಂದಿದೆಯೇ?

ಶ್ರೀ ತಿಪ್ಪೇಸ್ವಾಮಿ:- ಆ ಮಾನ್ಯ ಅಧ್ಯಕ್ಷರೇ, ನಮ್ಮ ಆರ್ಥಿಕ ಇತಿಮಿತಿಯೊಳಗೆ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಬಹುದೋ ಅಷ್ಟನ್ನು ಹಿಂದಿನವರೂ ಕೂಡ ಮಾಡಿಕೊಂಡು ಬಂದಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಚಾರ ಕೂಡ ಮುಖ್ಯವಾಗಿದ್ದು ಅದನ್ನು ಮಾಡಬೇಕಾಗಿದೆ. ಅವರ ಸಲಹೆಯನ್ನು ಪರಿಗಣನೆಗೆ ತೆಗೆದುಕೊಂಡು ಹೆಚ್ಚಿನ ಆದ್ಯತೆಯನ್ನು ಕೊಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಬಹಳ ಜವಾಬ್ದಾರಿಯುಳ್ಳ ಪ್ರಶ್ನೆ ಇದು. ನಮ್ಮ ರಾಜ್ಯದಲ್ಲಿ ಗೋಕಟ್ಟೆ, 10-15 ಎಕರೆಗೆ ನೀರಾವರಿಯಾಗುವಂಥ ಸಣ್ಣ ಸಣ್ಣ ಕಟ್ಟೆಗಳು ತುಂಬಾ ವರ್ಷಗಳಿಂದ ಇದ್ದುವು. ಅಂಥ ಲಕ್ಷಾಂತರ ಕಟ್ಟೆಗಳಿವೆ. ಅಂತರ್ಜಲ ಅಭಿವೃದ್ಧಿಯಾಗಲಿ ಎನ್ನುವ ದೃಷ್ಟಿಯಿಂದಲೇ ರಾಜರ ಕಾಲದಲ್ಲಿ ಮಾಡಿರತಕ್ಕಂಥ ಕಟ್ಟೆಗಳನ್ನು ನಾವು ಉಳಿಸಿಕೊಳ್ಳತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ನಬಾರ್ಡ್‌ನವರು ಕೂಡ ಆದ್ಯತೆಯನ್ನು ಕೊಟ್ಟು ಹೆಚ್ಚು ಹಣವನ್ನು ಕೊಡಬೇಕು. ಮಳೆಬಿದ್ದ ನೀರನ್ನು ನಾವು ಎಷ್ಟು ಶೇಖರಣೆ ಮಾಡಬೇಕೆಂಬ ಬಗ್ಗೆ ನಾವು ತ್ವರಿತವಾಗಿ ಸಣ್ಣ ನೀರಾವರಿ ಯೋಜನೆಯಲ್ಲಿ ಕಟ್ಟೆಗಳ ಮೂಲಕ ಸಂಗ್ರಹಿಸುವ ಕೆಲಸ ಮಾಡಿದರೆ ಯಾವುದೇ ಸಮಸ್ಯೆ ಬರಲಾರದು. ತಾವೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ 33 ಸಾವಿರ ಕೆರೆಯಲ್ಲಿ 10

ಸಾವಿರ ಕೆರೆ ಮಾತ್ರ ಉಳಿದಿದೆ ಇನ್ನು 23 ಸಾವಿರ ಕೆರೆಯಲ್ಲಿ ಯಾವುದಕ್ಕೆ ತೂಬಿಲ್ಲ, ಹೂಳೆತ್ತುವ ಕಾರ್ಯಕ್ರಮ ಇಲ್ಲ, ಒಂದು ವರ್ಷದಿಂದಲೂ ಯಾವುದೇ ಕಾರ್ಯಕ್ರಮ ಮಾಡಿಲ್ಲ, ಹೋದವರ್ಷವೂ ಇದೇ ಪ್ರಶ್ನೆ ಬಂತು, ಕನಿಷ್ಪ ಟ್ರಾಕ್ಟರ್ ಕೊಟ್ಟು ರೈತರನ್ನು ಇನ್‌ವಾಲ್ವ್ ಮಾಡುವಂತಹ ಒಂದು ಕಾರ್ಯಕ್ರಮ ರೂಪಿಸುವುದೂ ಆಗಲಿಲ್ಲ. ಜೊತೆಗೆ ಕೇಂದ್ರ ಸರ್ಕಾರದಿಂದ ಬಯಲುಸೀಮೆ ಅಭಿವೃದ್ಧಿಗೆಂದು ಜಾಸ್ತಿ ಚೆಕ್ ಡ್ಯಾಂಗಳನ್ನು ಹಾಕಿ ನೀರನ್ನು ಭೂಮಿಯಲ್ಲಿ ಶೇಖರಿಸುವಂತಹ ವ್ಯವಸ್ಥೆ ಇದೆ. ಹೆಚ್ಚು ಹಣ ಕೊಡುತ್ತಾರೆ, ಆ ಹಣ ಉಪಯೋಗಿಸಿ ನೀರು ಇಂಗಿಸಿ ಭೂಮಿಯಲ್ಲಿ ನೀರು ಉಳಿಸುವಂತಹ ಕೆಲಸವನ್ನು ತ್ವರಿತವಾಗಿ ತಾವು ಈಗ ಮಾಡಿದರೆ ಸಮಸ್ಯೆ ಪರಿಹರಿಸಬಹುದು.

ಶ್ರೀ ತಿಪ್ಪೆಸ್ವಾಮಿ:- ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ ಅಷ್ಟೆ ಪ್ರಾಮುಖ್ಯತೆ ಹೊಂದಿದೆ ಇದಕ್ಕೆ ನಾನು ಹೆಚ್ಚಿನ ಆದ್ಯತೆ ಕೊಡುತ್ತೇನೆ.

ಶ್ರೀ ಎಸ್.ಅಂಗಾರ:- ಸುಳ್ಯ ತಾಲ್ಲೂಕಿನಲ್ಲೂ ಕಪ್ಪು ಪ್ರದೇಶವೆಂದು ಘೋಷಣೆ ಮಾಡಿ ಸಣ್ಣ ನೀರಾವರಿ ಮತ್ತು ಕೊಳವೆ ಬಾವಿಗಳ ಬಗ್ಗೆ ಕೂಡ ಯಾವುದೇ ಕಾರ್ಯಕ್ರಮವಿಲ್ಲ. ಇದರಿಂದಾಗಿ ಅಲ್ಲಿ ಸಾಕಷ್ಟು ಗೊಂದಲವಾತಾವರಣವುಂಟಾಗಿದೆ. ನಬಾರ್ಡ್‌ನಿಂದ ಸಿಗುವ ಸಬ್ಸಿಡಿ ಕೂಡ ಪಿಎಲ್‌ಡಿ ಅಥವಾ ಬೇರೆ ಬ್ಯಾಂಕ್‌ಗಳಿಂದಿರಬಹುದು, ಸುಳ್ಯ ಮಲೆನಾಡು ಪ್ರದೇಶ ಹೆಚ್ಚು ಮಳೆ ಬೀಳುವ ಪ್ರದೇಶ ಇರುವುದರಿಂದ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟು ಕಪ್ಪು ಪ್ರದೇಶವೆಂದು ಘೋಷಣೆ ಮಾಡಿರುವುದರಿಂದ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ.

ಶ್ರೀ ತಿಪ್ಪೇಸ್ವಾಮಿ:- ಅಧ್ಯಕ್ಷರೇ ಭೂಗರ್ಭದಲ್ಲಿ ಇಂತಿಷ್ಟು ಪ್ರಮಾಣ ನೀರಿದ್ದರೆ ರೈತರಿಗೆ ಬೋರ್ ಹಾಕಿಸಿಕೊಳ್ಳಲು ಅನುಮತಿ ಕೊಡಿಸಲು ನಾನು ವ್ಯವಸ್ಥೆ ಮಾಡುತ್ತೇನೆ. ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆಂದು ಹೇಳಿರುವ ಬಗ್ಗೆ ನಾನು ಮತ್ತೆ ಅಧಿಕಾರಿಗಳನ್ನು ಕಳುಹಿಸಿ ತಪಾಸಣೆ ಮಾಡಿ ಅಲ್ಲಿ ಅವಕಾಶವಿದ್ದರೆ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ವಿಷಯ:- ದಕ್ಷಣ ಕನ್ನಡ ಜಿಲ್ಲೆಯಲ್ಲಿ ಹೊಸ ಪೊಲೀಸ್ ಠಾಣೆಯ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 182 (1400)

ಶ್ರೀ ಕೆ.ಪ್ರತಾಸ್‌ಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಿ ಹೊಸ ಪೋಲೀಸ್ ಠಾಣೆಯನ್ನು ತೆರೆಯುವ ಯೋಜನೆ ಸರಕಾರದವರ ಮುಂದಿದೆಯೇ?

ಆ) ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಇರುವ ಕುಂದಾಪುರ ತಾಲ್ಲೂಕು ಹೊಸಂಗಡಿಯಲ್ಲಿ ಪೋಲೀಸ್ ಠಾಣೆ ತೆರೆಯುವ ಯೋಜನೆ ಸರ್ಕಾರದವರ